# ಜೆ. ಎಂ. ಎಫ್. ಸಿ 2ನೇ ನ್ಯಾಯಾಲಯ, ಹುಬ್ಬಳ್ಳಿ
## ಸಿಸಿನಂ ಃ 2496/2022

**ಫಿರ್ಯಾದಿ** : ಗ್ರಾಮೀಣ ಪೋಲಿಸ ಠಾಣೆ, ಹುಬ್ಬಳ್ಳಿ

- ವಿರುದ್ದ –

ಆಪಾದಿತರು ಃ

| | |
|---|---|
| 1 | ವೀರನಗೌಡ ರಾಯನಗೌಡ ಪಾಟೀಲ |
| 2 | ರಾಯನಗೌಡ ವೀರನಗೌಡ ಪಾಟೀಲ |
| 3 | ಶಾಂತವ್ವ ಕೋಂ ವೀರನಗೌಡ ಪಾಟೀಲ |
| 4 | ಯಲ್ಲವ್ವ @ ರೂಪಾ ತಂದೆ ವೀರನಗೌಡ ಪಾಟೀಲ<br>ಎಲರೂ ಸಾಃ ಉಮಚಗಿ, ತಾಃ ಹುಬ್ಬಳ್ಳಿ |

## ದೋಷಾರೋಪಣೆ

ಶ್ರೀ. ಕರ್ನ ಸಿಂಗ್ ಆರ ಯು ಬಿ.ಕಾಂ.ಎಲ್.ಎಲ್.ಬಿ ಜೆ.ಎಂ.ಎಫ್.ಸಿ. 2ನೇ ನ್ಯಾಯಾಲಯ, ಹುಬ್ಬಳ್ಳಿ ಆದ ನಾನು, ಆರೋಪಿತರಾದ ನೀವು **ನಿಮ್ಮ ಮೇಲೆ ಈ ಕೆಳಗಿನಂತೆ ಆರೋಪಣೆಗಳನ್ನು** ಮಾಡುತ್ತೇನೆ.

ಹುಬ್ಬಳ್ಳಿ ಗ್ರಾಮೀಣ **ಪೊಲೀಸ್ ಠಾಣೆಯ ಸರಹದ್ದಿನ** ಪೈಕಿ ಉಮಚಗಿ ಗ್ರಾಮದ ಆರೋಪಿತರ ಮನೆಯ ಮುಂದೆ **ದಿನಾಂಕಃ** 30-03-2022 **ರಂದು** 20.30 ಗಂಟೆಯ ಸುಮಾರಿಗೆ ಸಾ.ಅ.ನಂ.4 ಮತ್ತು 6 ನೇದವರು ಆರೋಪಿತರಿಗೆ ನಾವು ಬಡವರು ಇರುತ್ತೇವೆ, ನಾವು ಮನೆ ಕಟ್ಟಿಸಿಕೊಳ್ಳಲು ನೀವು ಕೊಟ್ಟ ತಕರಾರು ಅರ್ಜಿಗಳನ್ನು ವಾಪಸ್ ತೆಗೆದುಕೊಳ್ಳಿರಿ ಎಂದು ಹೇಳುತ್ತಿರುವಾಗ ಆರೋಪಿ ನಂ. 2 ರಾಯನಗೌಡ ವೀರನಗೌಡ ಪಾಟೀಲ ಮತ್ತು ಆರೋಪಿ ನಂ. 1 ವೀರನಗೌಡ ರಾಯನಗೌಡ ಪಾಟೀಲ ನೀವು ಅದನೇನ ಕೇಳತೀರಲೇ ನಾವು ವಾಪಸ್ ತೆಗೆದುಕೊಳ್ಳುವುದಿಲ್ಲ ಅಂತಾ ಅನ್ನುತ್ತಿದ್ದಾಗ ಆರೋಪಿ ನಂ. 3 ಶಾಂತವ್ವ ಕೋಂ ವೀರನಗೌಡ ಪಾಟೀಲ ಮತ್ತು ಆರೋಪಿ ನಂ. 4 ಯಲ್ಲವ್ವ @ ರೂಪಾ ತಂದೆ ವೀರನಗೌಡ ಪಾಟೀಲ ನೀವು ನಿಮ್ಮ ಮನೆಯ ಒಳಗಿನಿಂದ ಹೊರಗಡೆ ಬಂದು ಅವಾಚ್ಯವಾಗಿ ಬೈದಾಡಿ ಸಾರ್ವಜನಿಕ ಶಾಂತತಾ ಭಂಗ ಉಂಟು ಮಾಡಿ ಭಾ.ದಂ.ಸಂ.ಕಲಂ. 504 ಸಹ ಕಲಂ 34 ಐ.ಪಿ.ಸಿ. ರ ರೀತ್ಯಾ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿ ನಂ. 3 ಮತ್ತು 4 ನೇದವರಾದ ನೀವು ಕೈಯಿಂದ ಹೊಡಿ ಬಡಿ ಮಾಡಿ ಭಾ.ದಂ.ಸಂ. 323 **ಸಹವಾಚಕ ಕಲಂ** 34 ಐ.ಪಿ.ಸಿ. ರ ಅಡಿ ರೀತ್ಯಾ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ಮೂರನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿ ನಂ.1 ನೀನು ಕಂದ್ಲಿಯಿಂದ ಪಿರ್ಯಾದಿ ದುಬ್ಬಕ್ಕೆ ಹೊಡೆದು ಮತ್ತು ಆರೋಪಿ ನಂ. 2 ನೀನು ಬಡಿಗೆಯಿಂದ ಸಾ.ಅ.ನಂ.4, 5 ಮತ್ತು 6 ನೇದವರಿಗೆ ಹೊಡೆದು ಭಾ.ದಂ.ಸಂ. 326 **ಸಹವಾಚಕ ಕಲಂ** 34 ಐ.ಪಿ.ಸಿ. ರ ಅಡಿ ರೀತ್ಯಾ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

ನಾಲ್ಕನೇಯದಾಗಿ, ಮೇಲೆ ಹೇಳಿದ ದಿನಾಂಕ, ವೇಳೆ ಮತ್ತು ಸ್ಥಳದಲ್ಲಿ ಆರೋಪಿ ನಂ.1 ಮತ್ತು ಆರೋಪಿ ನಂ. 2 ನೇದವರಾದ ನೀವು ಪಿರ್ಯಾದಿ ಹಾಗೂ ಸಾ.ಅ.ನಂ.4 ನೇದವರ ಸೀರೆಯನ್ನು ಹಿಡಿದು ಎಳೆದಾಡಿ ಮಾನಭಂಗಪಡಿಸಿ ಅವಮಾನವಾಗುವಂತೆ ಮಾಡಿ **ಭಾದಂಸಂ ಕಲಂ** 354(ಬಿ) **ಸಹವಾಚಕ ಕಲಂ** 34 ಐ.ಪಿ.ಸಿ. ರ ರೀತ್ಯಾ ದಂಡನೀಯವಾದ ಅಪರಾಧವನ್ನು ನನ್ನ ಸಂಜ್ಞಾನದಲ್ಲಿ ಎಸಗಿರುವಿರಿ.

**ಮೇಲ್ಕಂಡ ಅಪರಾಧಗಳ ವಿಚಾರಣೆ ಈ ನ್ಯಾಯಾಲಯದಲ್ಲಿ ನಡೆಯುವಂತೆ ನಿರ್ದೇಶಿಸುತ್ತೇನೆ.**

**(ಮೇಲಿನ ದೋಷಾರೋಪಣೆ ಸಾರಾಂಶವನ್ನು ಆರೋಪಿಗೆ ಓದಿ, ತಿಳಿ ಹೇಳಿದ ನಂತರ ಆರೋಪಿ ಅದನ್ನು ಅರ್ಥೈಸಿಕೊಂಡ ನಂತರ ನೀಡಿದ ಉತ್ತರಗಳನ್ನು ನಾನೇ ಸ್ವತ: ದಾಖಲು ಮಾಡಿದ್ದೇನೆ. ಸದರಿ ದಾಖಲೆಯು ಸರಿಯಾದುದು ಮತ್ತು ನಿಜವಾದುದು ಎಂದು ಧೃಡೀಕರಿಸುತ್ತೇನೆ )**

**ದಿನಾಂಕ** : 6.4.2023.

**ಜೆ. ಎಂ. ಎಫ್. ಸಿ-2, ಹುಬ್ಬಳ್ಳಿ**

## ಜೆ. ಎಂ. ಎಫ್. ಸಿ 2ನೇ ನ್ಯಾಯಾಲಯ, ಹುಬ್ಬಳ್ಳಿ
## ಸಿಸಿನಂ ಃ /

**ಫಿರ್ಯಾದಿ** : ಕೇಶ್ವಾಪುರ ಪೋಲಿಸ ಠಾಣೆ, ಹುಬ್ಬಳ್ಳಿ

- ವಿರುದ್ದ –

ಆಪಾದಿತರು ಃ

| | |
|---|---|
| | |

-ಃ ಹೇಳಿಕೆ ಃ-

**ಪ್ರಶ್ನೆ 1 ಃ- ನಿನಗೆ ಮೇಲೆ ಓದಿ ಹೇಳಿದ ಆರೋಪಣೆಗಳು ಅರ್ಥವಾಯಿತೇ ?**
**ಉತ್ತರ ಃ-**

**ಪ್ರಶ್ನೆ 2 ಃ- ಮೇಲ್ಕಂಡ ಆರೋಪಣೆಗಳಿಗೆ ತಪ್ಪೊಪ್ಪಿಕೊಳ್ಳುವಿರಾ ?**
**ಉತ್ತರ ಃ-**

**ಪ್ರಶ್ನೆ 3 ಃ-** ನೀವು ವಿಚಾರಣೆಯಾಗಬಯಸುವಿರಾ?
**ಉತ್ತರ ಃ-**

ಅರೋಪಣೆಗಳನ್ನು ಆರೋಪಿಗೆ ಓದಿ ತಿಳಿ ಹೇಳಿ ಅರೋಪಿ ನೀಡಿದ ಉತ್ತರವನ್ನು ಸ್ವತಃ ನಾನೇ ದಾಖಲು ಮಾಡಿದ್ದು ಸದರಿ ದಾಖಲಾತಿಯು ಪೂರ್ಣ ಹಾಗೂ ಸತ್ಯವಾದುದೆಂದು ದೃಢೀಕರಿಸುತ್ತೇನೆ.

ದಿಃ ಪ್ರ.ದ.ನ್ಯಾ.ದಂ. 2ನೇ ನ್ಯಾಯಾಲಯ, ಹುಬ್ಬಳ್ಳಿ.